ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:417/2024

ಚಾಸಾ:1 ಪ್ರಾಸಾ:1

ದಿನಾಂಕ: 09.04.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಪ್ರದೀಪ್ |
| ತಂದೆಯ ಹೆಸರು | : | ಪ್ರಕಾಶ್ |
| ವಯಸ್ಸು | : | 25 ವರ್ಷ |
| ಉದ್ಯೋಗ | : | ಅಟೋ ಚಾಲಕ |
| ವಾಸ ಸ್ಥಳ | : | ಕುಂಭಾಶಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:</u>**

ದಿ: 02-01-2024 ರಂದು ನಾನು ಕುಂಭಾಶಿಯ ಪಾಕ ಶಾಲೆಯ ಎದುರು ಇರುವ ಅಟೋ ನಿಲ್ದಾಣದಲ್ಲಿ ಬಾಡಿಗೆಗಾಗಿ ನಾನು ಕಾಯುತ್ತಿದ್ದಾಗ ಒಬ್ಬರು ವಯಸ್ಸಾದವರು ಕುಂದಾಪುರದಿಂದ ಉಡುಪಿ ಕಡೆಗೆ ಸ್ಕೂಟಿಯಲ್ಲಿ ಹೋಗುತ್ತಿದ್ದು, ಹಿಂದಿನಿಂದ ಕಾರು ಅತೀ ವೇಗವಾಗಿ ಬಂದು ಸ್ಕೂಟಿಯ ಹಿಂಭಾಗಕ್ಕೆ ಡಿಕ್ಕಿಪಡಿಸಿರುತ್ತಾರೆ. ಡಿಕ್ಕಿ ಹೊಡೆದಾಗ ಅದರ ಸವಾರ ರಸ್ತೆಗೆ ಬಿದ್ದಿರುತ್ತಾರೆ. ಕಾರು ಸ್ವಲ್ಪ ಮುಂದೆ ಹೋಗಿ ನಿಲ್ಲಿಸಿರುತ್ತಾರೆ. ವಯಸ್ಸಾದವರು ರಸ್ತೆಯಲ್ಲಿ ಬಿದ್ದಿದ್ದು ಉಸಿರಾಡುತ್ತಿದ್ದರು. ನಾವು ಕೂಡಲೇ ಆತನನ್ನು ಡಿಕ್ಕಿಪಡಿಸಿದ ಕಾರಿನಲ್ಲಿ ಹಾಕಿ ಆಸ್ಪತ್ರೆಗೆ ಕಳುಹಿಸಿರುತ್ತೇವೆ. ಸದ್ರಿ ಕಾರಿನ ನಂಬ್ರ ಕೆಎ-20-ಎಂಡಿ-3249 ಆಗಿರುತ್ತದೆ. ಆತನನ್ನು ಎನ್ ಆರ್ ಆಚಾರ್ಯ ಆಸ್ಪತ್ರೆಗೆ ದಾಖಲಿಸಿದ್ದು ನಂತರ ಮಣಿಪಾಲಕ್ಕೆ ಸ್ಥಳಾಂತರಿಸುವ ಮಧ್ಯದಲ್ಲಿ ಮೃತಪಟ್ಟಿರುತ್ತಾರೆ. ನಂತರ ಈ ಹಿನ್ನೆಲೆಯಲ್ಲಿ ನಾನು ಕುಂದಾಪುರ ಸಂಚಾರಿ ಠಾಣೆಯಲ್ಲಿ ದೂರು ದಾಖಲಿಸಿರುತ್ತೇನೆ.

ಪೊಲೀಸರು ಪಂಚನಾಮೆಗೆ ಬಂದಾಗ ಜಾಗವನ್ನು ನಾನು ತೋರಿಸಿರುತ್ತೇನೆ. ಸ್ಥಳದಲ್ಲಿ ವಾಹನಗಳು ಮತ್ತು ಹೆಲ್ಮೆಟ್ ಇದ್ದು ಪೊಲೀಸರು ಜಾಗವನ್ನು ಗುರುತಿಸಿರುತ್ತಾರೆ. ಅಲ್ಲಿ ಪಂಚನಾಮೆ ಜರುಗಿಸಿ ಅವುಗಳನ್ನು ವಶಕ್ಕೆ ಪಡೆದಿರುತ್ತಾರೆ.

ಸಾಕ್ಷಿ ದೂರು, ಸ್ಥಳ ಪಂಚನಾಮೆ, ನಕ್ಷೆ,ಗಳಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಸದ್ರಿ ದಾಖಲೆಗಳನ್ನು ನಿಪಿ-1 ರಿಂದ 3 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ರಿಂದ 3(ಎ) ಎಂದು, ಸ್ಥಳ ಪಂಚನಾಮೆ ಕಾಲಕ್ಕೆ ತೆಗೆದ ಪೋಟೋವನ್ನು ನಿಪಿ-4 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಕಾರು ಮತ್ತು ದ್ವಿ ಚಕ್ರವಾಹನದ ತಲಾ 2 ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-5 ರಿಂದ 8 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಹೆಚ್ ಆರ್ ಎಸ್ ರವರಿಂದಃ</u>**

**ಪಾಟೀ ಸವಾಲನ್ನು ಕಾಲವಕಾಶ ಕೋರಿದ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**